**ಕರೆನ್ಸಿ ನೋಟುಗಳಿಗೆ ಪಿನ್ನುಗಳನ್ನು ಹಾಕುವುದನ್ನು ಬಿಟ್ಟುಬಿಡಿ: ಬ್ಯಾಂಕುಗಳಿಗೆ ಮತ್ತು ಸಾರ್ವಜನಿಕರಿಗೆ ಆರ್‌ಬಿಐ ಮನವಿ**

**ಫೆಬ್ರವರಿ 25, 2003**

ಭಾರತೀಯ ರಿಸರ್ವ್ ಬ್ಯಾಂಕು ಕರೆನ್ಸಿ ನೋಟುಗಳ ಕಂತೆಗಳಿಗೆ ಪಿನ್ನು ಹಾಕುವ ಪದ್ಧತಿಯನ್ನು ಮುಂದುವರಿಸಬಾರದು ಎಂಬುದನ್ನು ಕಡ್ಡಾಯ ಮಾಡಿದೆ. ಸಾರ್ವಜನಿಕರಿಗೆ ಸ್ವಚ್ಛ ಹಾಗೂ ಉತ್ತಮ ನೋಟುಗಳನ್ನು ಕೊಡುವ ಧ್ಯೇಯೋದ್ದೇಶದಿಂದ ಸಾರ್ವಜನಿಕ ಹಿತಾಸಕ್ತಿಯಲ್ಲಿ 1949ರ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 35ಎ ಪ್ರಕರಣದ ಅಡಿಯಲ್ಲಿ ಬ್ಯಾಂಕುಗಳಿಗೆ ಅದು ನಿರ್ದೇಶನ ನೀಡಿದೆ.

ಭಾರತೀಯ ರಿಸರ್ವ್ ಬ್ಯಾಂಕು, ಬ್ಯಾಂಕುಗಳಿಗೆ ಮತ್ತು ಸಾರ್ವಜನಿಕರಿಗೆ ಪಿನ್ನುಗಳಿಲ್ಲದ ಹೊಸ ನೋಟುಗಳನ್ನು ಸರಬರಾಜು ಮಾಡುತ್ತಲೇ ಬಂದಿದ್ದರೂ ಈ ಹೊಸ ನೋಟುಗಳನ್ನು ಬ್ಯಾಂಕುಗಳು ಸಾರ್ವಜನಿಕರಿಗೆ ಸರಬರಾಜು ಮಾಡುವ ಮುನ್ನ ಅದಕ್ಕೆ ಪಿನ್ನುಗಳನ್ನು ಹಾಕಿರುವುದನ್ನು ಗಮನಿಸಿದೆ. ಅಲ್ಲದೆ, ಮತ್ತೆ ನೀಡಬಹುದಾದ ನೋಟಿನ ಕಂತೆಗಳಿಗೆ ದಪ್ಪವಾದ, ಬಲವಾದ ಅನೇಕ ಪಿನ್ನುಗಳನ್ನು ಹಾಕುವ ಪದ್ಧತಿಯನ್ನು ಬ್ಯಾಂಕುಗಳು ಅನುಸರಿಸುತ್ತಿದ್ದವು. ಈ ಅನೇಕ ಪಿನ್ನುಗಳನ್ನು ತೆಗೆಯಲು ಜನ ಕಷ್ಟಪಡುತ್ತಿದ್ದರು. ಇದರಿಂದ ಜನತೆ ಗಾಯಗೊಳ್ಳುತ್ತಿದ್ದುದೇ ಅಲ್ಲದೆ ಈ ಪಿನ್ನುಗಳಿಂದ ನೋಟುಗಳಿಗೂ ಹಾನಿಯುಂಟಾಗುತ್ತಿತ್ತು. ಬ್ಯಾಂಕುಗಳು ಜನತೆಯಿಂದ ಅಂಥ ಹಾಳಾದ ನೋಟುಗಳನ್ನು ಸ್ವೀಕರಿಸಲು ನಿರಾಕರಿಸುತಿದ್ದವು. ಒಳ್ಳೆಯ ನೋಟುಗಳು ಹಾಳಾಗುತ್ತಿದ್ದುದಕ್ಕೆ ಮುಖ್ಯ ಕಾರಣ ಪಿನ್ನುಗಳನ್ನು ಹಾಕುವುದು ಎಂದು ತಿಳಿದು ಬಂತು.

ಭಾರತೀಯ ರಿಸರ್ವ್ ಬ್ಯಾಂಕು ಹಾಗೂ ಸರ್ಕಾರ, ನೋಟುಗಳಿಗೆ ಪಿನ್ನುಗಳನ್ನು ಹಾಕುವುದರ ವಿರುದ್ಧ ಅಧಿಕ ಸಂಖ್ಯೆಯಲ್ಲಿ ದೂರುಗಳನ್ನು ಸ್ವೀಕರಿಸುತ್ತಿದ್ದವು. ರಿಸರ್ವ್ ಬ್ಯಾಂಕು ನಡೆಸಿದ ಅಧ್ಯಯನದಿಂದ, ಬೇರಾವುದೇ ದೇಶವೂ ನೋಟಿನ ಕಂತೆಗಳಿಗೆ ಪಿನ್ನುಗಳನ್ನು ಹಾಕುವುದಿಲ್ಲವೆಂದು ತಿಳಿದು ಬಂತು. ರಿಸರ್ವ್ ಬ್ಯಾಂಕು, 1998ರಿಂದ ನೋಟಿನ ಕಂತೆಗಳಿಗೆ ಪಿನ್ನು ಹಾಕುವ ಪದ್ಧತಿಯನ್ನು ಮುಂದುವರಿಸಬಾರದೆಂಬ ಸಲಹೆ ನೀಡುತ್ತಲೇ ಬಂದಿದೆ. ನೋಟಿನ ಕಂತೆಗಳಿಗೆ ಪಿನ್ನು ಹಾಕುವುದನ್ನು ನಿಷೇಧಿಸುವ ನಿರ್ದೇಶನವನ್ನು 2002ರ ನವೆಂಬರ್‌ನಲ್ಲಿ ಹೊರಡಿಸಲಾಯಿತು.

ರಿಸರ್ವ್ ಬ್ಯಾಂಕು ಕೈಗೊಂಡ ಈ ಕ್ರಮವನ್ನು ಜನತೆ ವ್ಯಾಪಕವಾಗಿ ಸ್ವಾಗತಿಸಿದ್ದಾರೆ. ರಿಸರ್ವ್ ಬ್ಯಾಂಕಿನ ಕಚೇರಿಗಳು, ಬ್ಯಾಂಕ್ ಶಾಖೆಗಳು, ಸರ್ಕಾರಿ ಕಚೇರಿಗಳು ಮುಂತಾದುವುಗಳಿಂದ ಸ್ವೀಕರಿಸಿದ ನೋಟುಗಳನ್ನು ಕ್ಲೋಸ್ಡ್ ಸರ್ಕ್ಯುಟ್ ಟೆಲಿವಿಷನ್ ಸಹಾಯದಿಂದ ಅತ್ಯಂತ ಕಟ್ಟುನಿಟ್ಟಾದ ಭದ್ರತೆಯಿರುವ ಪರಿಸರದಲ್ಲಿ ಸ್ವಯಂಚಾಲಿತ ಸಂಸ್ಕರಣಾ ಯಂತ್ರದಲ್ಲಿ ಸಂಸ್ಕರಿಸುತ್ತವೆ.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–2003/891